**TADIPATRI GURUKULA**

Lyrics courtesy: Shri Prasanna Krishna,CA

ಕಲ್ಯಾಣಿ ಪೂರ್ಣೆ ಕರುಣಿಸು ವರ ಮಹಾಲಕ್ಷ್ಮೀ | ಕಲ್ಯಾಣಿ ಪೂರ್ಣೆ ಕರುಣಿಸು || ಪ ||

ಕಮಲಾಸದನೇ ಸುಸ್ಮಿತ ವದನೇ | ಕಮಲಾ ನೇತ್ರೇ ಮಂಜುಳಗಾತ್ರೇ |
ವಿಮಲಾಪಾಂಗ ವೀಕ್ಷಣದಿಂದ ಕಮಲಾಸನಭವ ಪದಗಳ ನೀಡುವಿ || ೧ ||

ಮಂಗಳ ಮಯಳೆ ತಿಂಗಳ ಶತನಿಭೆ, ಪೊಂಗೊಳಲೂದುವ ರಂಗನ ನಿಜ ಸತಿ ||
ಶೃಂಗಾರ ಸಾರಳೆ, ಪ್ರಸನ್ನೆ ವರಗಳ ಹಿಂಗದೆ ಪಾಲಿಸು ಹರುಷಸುಪೂರ್ಣಳೆ || ೨ ||

ಅಕ್ಷಯ ಶೋಭನ ಸುರಿವೋ ಶ್ರೀಕರೆ, ಲಕ್ಷ್ಮೀಯನ್ನಯ್ಯಭೀಷ್ಟವ ಪಾಲಿಸು |
ಪಕ್ಷಿಗಮನನಾ ವಕ್ಷದಿ ಮೆರೆಯುವ ಅಕ್ಷರ ಪುರುಷಳೆ ವರಮಹಾಲಕ್ಷ್ಮೀ || ೩ ||

ರನ್ನ ಮುಕುರ ಕಿರೀಟ ಶೋಭಿತೆ, ಪೊನ್ನಾಂಬರೆ ಪರಿಪೂರ್ಣಳೆ ಪಾಲಿಸು |
ಗಂಧ ಕಸ್ತೂರಿ ಕುಂಕುಮ ಫಾಲೆ ಪ್ರಸನ್ನದಾಯಕ ಸಿರಿ ನೇತ್ರದಿ ನೋಡೆನ್ನ || ೪ ||

ಕಮಲಾ ಮಲ್ಲಿಗೆ ಕೇದಿಗೆ ಜಾಜಿ, ವಿಮಲಾ ಮುಕ್ತಾ ಮಣಿಮಯಹಾರಳೇ |
ಕಮಲೇ ನೀ ಗತಿ, ಕೋಮಲೆ ಚಿತ್ತಳೆ ಅಮಲ ಜಯೇಶ ವಿಠಲನ ತೋರಿಸು || ೫ ||